ಶ್ರೀ ಎಂ. ರಘುಪತಿ.—ನೆನ್ನೆ ಮಾನ್ಯ ಬಂಗಾರಪ್ಪನವರು ಈ ಸದನದ ಮೂಲಕ ಒಂದು ಪ್ರಸ್ತಾವ ತಂದು ಪಾಸ್ ಮಾಡಿ ಕೇಂದ್ರಕ್ಕೆ ಕಳುಹಿಸಬೇಕೆಂಬ ಸೂಚನೆಯನ್ನು ಕೊಟ್ಟರು. ನಾನು ನಾಳೆ ದೆಲ್ಲಿಗೆ ಹೋಗುತ್ತಿದ್ದೇನೆ. ಮತ್ತೆ ಕೇಂದ್ರದ ಮಂತ್ರಿಗಳ ಮೇಲೆ ಒತ್ತಾಯ ತರುತ್ತೇನೆ. ಅಲ್ಲಿಗೂ ಆಗದೇ ಇದ್ದರೆ, ಈ ಸದನ ಏನು ಆದೇಶ ಕೊಡುತ್ತದೆ ಆ ರೀತಿ ಮಾಡುತ್ತೇನೆ.

ಶ್ರೀ. ವಿ. ಎಸ್. ಆಚಾರ್ಯ.—ಮಾನ್ಯ ಸದಸ್ಯರಾದ ಧನಂಜಯ ಅವರು ಹೇಳಿದ ವಿಚಾರ ಮಾನ್ಯ ಮಂತ್ರಿಗಳಿಗೆ ಅರ್ಥವಾಗಲಿಲ್ಲ. ಮದ್ರಾಸ್, ಮೈಸೂರು, ಮಂಗಳೂರು, ಉಡುಪಿ, ಪಣಜಿ ಮುಖಾಂತರ ಬಾಂಬೆಗೆ ಮೈಕ್ರೋವೇವ್ ಇದೆ. ಅದೇ ರೀತಿ ಬಾಂಬೆಯಿಂದ ಮದ್ರಾಸ್‌ಗೆ ಬರುತ್ತದೆ. ಮೈಸೂರು, ಮಂಗಳೂರು ಮತ್ತು ಮಡಕೇರಿಯಲ್ಲಿ ಈ ಚಾನಲ್ಸ್ ಹೋಗಿವೆ. ನಮ್ಮ ಊರಿನಲ್ಲೂ ಮೈಕ್ರೋವೇವ್ ತಂತಿ ಹಾದು ಹೋಗುತ್ತದೆ ತಾವು ಕೇಂದ್ರಕ್ಕೆ ಇದರ ಬಗ್ಗೆ ಬರೆಯಬೇಕು. ಹಿಂದೆ ನಾನು ಇದಕ್ಕೆ ಸಂಬಂಧಪಟ್ಟ ಇಲಾಖೆಯ ಅಡ್ವೈಸರಿ ಕಮಿಟಿಯಲ್ಲಿದ್ದಾಗ ಕೇಂದ್ರಸರ್ಕಾರದ ಸಂಪರ್ಕ ಖಾತೆ ಸಚಿವರ ಹತ್ತಿರ ಮಾತನಾಡಿದೆ ಆಗ ಅವರು ರಾಜ್ಯ ಸರ್ಕಾರದಿಂದ ವಿನಂತಿ ಬಂದಾಗ ಮಂಗಳೂರು, ಮೈಸೂರಿನಲ್ಲಿ ಟಿ.ವಿ. ರಿಲೈ ಮಾಡುತ್ತೇವೆಂದು ಹೇಳಿದರು. ಈಗ ಬೆಂಗಳೂರಿನಲ್ಲಿ ಟಿ.ವಿ. ಕೇಂದ್ರ ಸ್ಥಾಪನೆ ಆದರೆ ಸಂತೋಷ. ಮದ್ರಾಸ್ ಮುಂಬೈ ಚಾನಲ್‌ಗಳಿಂದ ಮೈಸೂರು, ಮಂಗಳೂರು ಮಂಡಕೇರಿಗೆ ತೆಗೆದುಕೊಳ್ಳಲಿಕ್ಕೆ ಆಗುತ್ತದೆಯೇ ಫೈನಾನ್ಷಿಯಲ್ ಕಮಿಟ್‌ಮೆಂಟ್ ಸ್ವಲ್ಪ ಕಡಿಮೆ ಯಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಸಚಿವರು ಸಮರ್ಪಕವಾಗಿ ಉತ್ತರ ಕೊಡಬೇಕು.

ಶ್ರೀ ಎಂ. ರಘುಪತಿ.—ಕೇಂದ್ರ ಸರ್ಕಾರದವರ ಜೊತೆ ಈ ವಿಚಾರ ಪ್ರಸ್ತಾಪ ಮಾಡಿದೆ. ಮಾನ್ಯ ಆಚಾರ್ಯ ಅವರು ಏನು ಹೇಳಿದ್ದಾರೆ ಅದು ಸುಲಭ ಖರ್ಚಿನಲ್ಲಿ ಆಗುತ್ತದೆ. ಈ ವಿಚಾರವನ್ನು ಕೇಂದ್ರ ಮಂತ್ರಿಗಳ ಅವಗಾಹನೆಗೆ ತಂದಿದ್ದೇನೆ. ನೇರವಾಗಿ ಕನ್ನಡ ಕಾರ್ಯಕ್ರಮ ನೋಡಬೇಕೆಂದರೆ ಇಲ್ಲಿ ಕೇಂದ್ರ ಸ್ಥಾಪನೆಯಾಗಬೇಕು.

ಶ್ರೀ ವಿ. ಎಸ್. ಆಚಾರ್ಯ.—ನವೆಂಬರ್ ಒಂದನೇ ತಾರೀಖಿನಲ್ಲಿ ಕೊಡಿಸುತ್ತೀರಾ ?

ಶ್ರೀ ಎಂ. ರಘುಪತಿ.— ಸರ್ವ ಪ್ರಯತ್ನ ಮಾಡುತ್ತೇನೆ.

ಬಾಗಲಕೋಟೆ ಗದ್ದನಕೇರಿ ಗ್ರಾಮದ ಜನತಾ ಮನೆಗಳ ಬಗ್ಗೆ

೨೩೭ ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ (ಗುಲೇದ್‌ಗಂಡ್ಡ). ಮಾನ್ಯ ಕಾನೂನು ಮತ್ತು ಸಂಸದೀಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಬಾಗಲಕೋಟೆ ತಾಲ್ಲೂಕಿನ ಗದ್ದನಕೇರಿ ಗ್ರಾಮದ ಹಿಂದುಳಿದ ಜನಾಂಗಕ್ಕೆ ತಾ : ೨೧-೬-೧೯೭೯ ರಂದು ಜನತಾ ಗೃಹಗಳ ಹಕ್ಕುಪತ್ರಗಳನ್ನು ಹಿಂದಿನ ಸರ್ಕಾರದವರಿಂದ ಹಂಚಲಾಗಿದ್ದೀತೆ

ಬ) ಹಾಗಿದ್ದಲ್ಲಿ ಯಾರು ಹಂಚಿದರು, ಹಂಚಿದ ಗೃಹಗಳ ಬಗ್ಗೆ ಸೂಕ್ತ ಮಾಹಿತಿಯನ್ನು ತಿಳಿಸ ಲಾಗುವುದೆ ?

ಶ್ರೀ ಎ. ಲಕ್ಷ್ಮಿಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ವಸತಿ ಮಂತ್ರಿಗಳು).—

ಅ) ಹೌದು

ಬ) ಬಾಗಲಕೋಟೆ ತಾಲ್ಲೂಕಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಯವರು ಹಂಚಿದರು. ಹಂಚಿದ ಗೃಹಗಳ ಸಂಖ್ಯೆ ೧೬

ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ.—ಅಧ್ಯಕ್ಷರೆ, ಹಕ್ಕು ಪತ್ರ ೧೬ ಎಂದು ಹೇಳಿದ್ದಾರೆ. ಅದು ೧೬ ಅಲ್ಲ. ೨೩ ನನಗೆ ಬಂದ ವರದಿ ಪ್ರಕಾರ ೧೬ ಮಾತ್ರ ಅಲ್ಲ. ಹಿಂದಿನ ಸರ್ಕಾರದಲ್ಲಿ ಹಿಂದುಳಿದವರ ರಕ್ಷಣೆ, ಅಲ್ಪಸಂಖ್ಯಾತರ ರಕ್ಷಣೆ, ಹರಿಜನ ಗಿರಿಜನರ ರಕ್ಷಣೆ ಮಾಡುತ್ತೇವೆಂದು ಹೇಳಿ ೨೩ ಜಾಗಗಳ ಹಕ್ಕು ಪತ್ರಗಳನ್ನು ಕೊಟ್ಟರೆ ಹೊರತು ಅದರ ಪ್ಲಾಟುಗಳನ್ನು ಅವರಿಗೆ ತೋರಿಸಲಿಲ್ಲ. ಆ ಪ್ಲಾಟುಗಳು

ಮಂಗಮಾಯವಾದದೇ ಎನ್ನುವುದು ನಮ್ಮ ಮುಂದಿರುವ ಪ್ರಶ್ನೆ. ೨೩ ಹಕ್ಕು ಪತ್ರ ಕೊಟ್ಟಂತಹ ಜನರಿಗೆ ಪ್ಲಾಟುಗಳು ಸಿಕ್ಕ ಬೇಕಾಗಿದೆ ಎನ್ನತಕ್ಕದ್ದೇ ನಮ್ಮ ಮುಂದಿರುವ ಪ್ರಶ್ನೆ.

ಶ್ರೀ ಎ. ಲಕ್ಷ್ಮಿಸಾಗರ್.—ದಿನಾಂಕ ೨೧-೬-೮೯ರಂದು ಬಾಗಲಕೋಟೆ ತಾಲ್ಲೂಕಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಯವರ ೪೭ ಕುಟುಂಬಗಳಿಗೆ ಗೃಹ ನಿವೇಶನ ಹಂಚಿದ್ದಾರೆ ಮತ್ತು ೧೬ ಜನರಿಗೆ ಜನತಾ ಗೃಹ ಕೊಟ್ಟಿದ್ದಾರೆ.

ಸುಳ್ಯ ಮತ್ತು ಪುತ್ತೂರು ತಾಲ್ಲೂಕುಗಳ ಜನತಾ ಗೃಹಗಳ ಬಗ್ಗೆ

೨೩೮ ಶ್ರೀ ಬಿ. ಹುಕ್ರಪ್ಪ (ಸುಳ್ಯ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :

(ಅ) ಸುಳ್ಯ ಮತ್ತು ಪುತ್ತೂರು ತಾಲ್ಲೂಕುಗಳ ಬಲ್ಯ, ರಾಮಕುಂಜ ಕಡಬ ಇತ್ಯಾದಿ ಸ್ಥಳಗಳಲ್ಲಿರುವ ಹರಿಜನ-ಗಿರಿಜನರಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆಯೆ ;

(ಆ) ಇಲ್ಲದಿದ್ದರೆ ಕಾರಣಗಳೇನು ;

(ಇ) ಈ ಬಗ್ಗೆ ಸರ್ಕಾರದವರು ಕೈ ಕೊಂಡ ಅಥವಾ ಕೈಕೊಳ್ಳಲು ಉದ್ದೇಶಿಸಿರುವ ತಂತ್ರ ಕ್ರಮಗಳೇನು ?

ಶ್ರೀ ಎ. ಲಕ್ಷ್ಮಿಸಾಗರ್.—(ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಸಮತಿ ಮಂತ್ರಿಗಳು)

(ಅ) ಹೌದು ಕಲ್ಪಿಸಲಾಗಿದೆ.

(ಆ) ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಮಾನ್ಯ ಅಧ್ಯಕ್ಷರೆ ಈ ಉತ್ತರದ ಜೊತೆಗೆ ನಾನು ಇನ್ನೂ ಕೆಲವು ವಿಷಯಗಳನ್ನು ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಈ ಯೋಜನೆ ಮಂಜೂರಾದ ವರ್ಷ ಮತ್ತು ಹರಿಜನ ಗಿರಿಜನರಿಗೆ ಎಷ್ಟೆಷ್ಟು ಮನೆಗಳನ್ನು ಕೊಡಲಾಗಿದೆ ಎಂಬುದರ ಪಟ್ಟಿ ಈ ರೀತಿ ಇದೆ ; ೧೯೭೮-೭೯ರಲ್ಲಿ ಗಿರಿಜನರ ಉಪ ಯೋಜನೆಯ ಪ್ರಕಾರ ಗಿರಿಜನರಿಗೆ ೧ ಮನೆ ೮೦-೮೧ರಲ್ಲಿ ಬ್ಯಾಂಕ್ ನೆರವು ಯೋಜನೆಯ ಪ್ರಕಾರ ಹರಿಜನರಿಗೆ ೩ ಮನೆಗಳು, ೮೨-೮೩ರಲ್ಲಿ ಹರಿಜನರಿಗೆ ೩ ಮನೆಗಳು, ಇದು ಬಲ್ಯ ಗ್ರಾಮದಲ್ಲಿ ಕೊಟ್ಟಿರುವುದು. ಇನ್ನು ಕಡಬದಲ್ಲಿ ೭೬-೭೭ರಲ್ಲಿ ಜನತಾ ವಸತಿ ಯೋಜನೆಯ ಪ್ರಕಾರ ಹರಿಜನರಿಗೆ ೨ ಮನೆಗಳು. ೭೮-೭೯ರಲ್ಲಿ ಗಿರಿಜನರಿಗೆ ಉಪ ಯೋಜನೆಯ ಪ್ರಕಾರ ೭ ಮನೆಗಳು. ೮೧-೮೨ರಲ್ಲಿ ಬ್ಯಾಂಕ್ ನೆರವು ಯೋಜನೆಯ ಪ್ರಕಾರ ಹರಿಜನರಿಗೆ ೨ ಮನೆಗಳು, ೮೨-೮೩ರಲ್ಲಿ ಹರಿಜನರಿಗೆ ೨ ಮತ್ತು ಗಿರಿಜನರಿಗೆ ೨ ಮನೆಗಳು. ಇನ್ನು ರಾಮಪುಂಜದಲ್ಲಿ ೮೦-೮೧ರಲ್ಲಿ ಬ್ಯಾಂಕ್ ನೆರವು ಯೋಜನೆಯ ಪ್ರಕಾರ ಹರಿಜನರಿಗೆ ೧ ಮನೆ. ೮೨-೮೩ರಲ್ಲಿ ಹರಿಜನರಿಗೆ ೨ ಮನೆಗಳು. ಒಟ್ಟು ಹರಿಜನರಿಗೆ ೧೪ ಮತ್ತು ಗಿರಿಜನರಿಗೆ ೧೧ ಮನೆಗಳು.

ಶ್ರೀ ಬಿ.ಕಿಲ ಹುಕ್ರಪ್ಪ.—ಬಲ್ಯ ಮತ್ತು ರಾಮಪುಂಜ ಗ್ರಾಮದಲ್ಲಿ ಎಷ್ಟು ಹರಿಜನ ಕುಟುಂಬಗಳು ಮತ್ತು ಎಷ್ಟು ಗಿರಿಜನ ಕುಟುಂಬಗಳಿವೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎ. ಲಕ್ಷ್ಮಿಸಾಗರ್.—ಈಗ ನನ್ನ ಹತ್ತಿರ ಇದಕ್ಕೆ ಸಂಬಂಧಪಟ್ಟ ಮಾಹಿತಿ ಇಲ್ಲ. ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಕೆ. ರಾಮಭಟ್.—ಒಟ್ಟು ಎಷ್ಟು ಮನೆಗಳಿವೆ ? ಎಷ್ಟು ಜನರಿಗೆ ಕೊಟ್ಟಿದ್ದೀರಿ ?

ಶ್ರೀ ಎ. ಲಕ್ಷ್ಮಿಸಾಗರ್.—೮೨-೮೩ರಲ್ಲಿ ಪುತ್ತೂರು ತಾಲ್ಲೂಕಿಗೆ ಮಂಜೂರಾದ ೮೫೦ ಜನತಾ ಮನೆಗಳ ಪೈಕಿ ೩೫೫ ಜನತಾ ವಸತಿ ಯೋಜನೆಯ ಪ್ರಕಾರ ಹಾಗೂ ೩೫೦ ಮನೆಗಳನ್ನು ಉಪಯೋಜನೆಯ ಪ್ರಕಾರ ಮೊಸಲಿಟ್ಟು ಕೊಟ್ಟಿದ್ದೇವೆ. ಪಂಚಾಯಿತಿಗಳ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಮುಖಾಂತರ ಜನರಲ್ಲಿ ಈ ಪ್ರಚಾರ ಕಾರ್ಯವನ್ನು ಕೈಗೊಳ್ಳಲಾಗಿತ್ತು. ಪ್ರಸ್ತುತ್ಕ ಸಾಲಿನಲ್ಲಿ ಹರಿಜನರಿಗೆ ಅದಷ್ಟೂ ಹೆಚ್ಚಿನ ಸಂಖ್ಯೆಯಲ್ಲಿ ಮನೆಗಳನ್ನು ಒದಗಿಸಲು ಕ್ರಮ ಕೈಗೊಳ್ಳುತ್ತಿದ್ದೇವೆ.